IGP ಕೂಡ ಬಂದಿರುವುದರಿಂದ ಒಂದಷ್ಟು ಪರಿಸ್ಥಿತಿ ಉದ್ಭವವಾಗಿದೆ. ಆ ಕುರಿತು ಏನು ಸಭೆಯ ಗಮನಕ್ಕೆ ತಂದಿದ್ದಾರೆ ಅದನ್ನು ನಾನು

ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತಂದು, ಸೂಕ್ತವಾಗಿ ಕ್ರಮ ಜರುಗಿಸಿ, ಆ ಸಮಸ್ಯೆಯನ್ನು ಪರಿಹರಿಸುತ್ತೇನೆ.

ಡಾ : ಹೆಚ್.ಸಿ.ಮಹದೇವಪ್ಪ :– ಲೋಕಾಯುಕ್ತ ಪೊಲೀಸ್ ಮ್ಯಾನುಯಲ್ ಬಗ್ಗೆಯೂ ಹೇಳಿ. ಅದು ಬಹಳ important.

ಶ್ರೀ ಎಸ್.ಸುರೇ:ಶ್ ಕುಮಾರ್:– ಲೋಕಾಯುಕ್ತ ಪೊಲೀಸ್ ಮ್ಯಾನುಯಲ್ ಹೊರಡಿಸುವ ಬಗ್ಗೆ ಕೂಡ ಪರಿಶೀಲಿಸುತ್ತೇವೆ.

7) ವಿಷಯ : ಮುಳ ಬಾಗಿಲಿನ ಹತ್ತಿರ ಗ್ಯಾಸ್ ಸಿಲಿಂಡರ್ ಮತ್ತು ಲಾರಿಯ ನಡುವೆ ಅಪಘಾತವಾಗಿ ಮಡಿದ ಕುಟುಂಬದವರಿಗೆ ಪರಿಹಾರ ಘೋಷಿಸುವ ಬಗ್ಗೆ.

ಶ್ರೀ ಅಮರೇಶ್ (ಮುಳಬಾಗಿಲು) :– ಮಾನ್ಯ ಅಧ್ಯಕ್ಷರೆ, ನಿನ್ನೆ ನಮ್ಮ ತಾಲ್ಲೂಕಿನಲ್ಲಿ ಟ್ಯಾಂಕರ್ ಮತ್ತು ಲಾರಿ ಮುಖಾಮುಖಿ ಡಿಕ್ಕಿಯಾಗಿ ಸುಮಾರು 4 ಜನ ಸಾವಿಗೀಡಾಗಿ ಅಲ್ಲಿ ದೊಡ್ಡ ಆತಂಕ ಸೃಷ್ಟಿಯಾಗಿತ್ತು. ಸದರಿ ಅಪಘಾತದಲ್ಲಿ ಮರಣ ಹೊಂದಿರತಕ್ಕಂಥ ಅಮಾಯಕರ ನೆರವಿಗೆ ಸರ್ಕಾರ ಧಾವಿಸಿ ಮೃತ ಕುಟುಂಬ ವರ್ಗದವರಿಗೆ ಪರಿಹಾರವನ್ನು ಘೋಷಿಸಬೇಕೆಂದು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇವೆ.

ಶ್ರೀ ಎಸ್.ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಶಾಸನ ರಚನೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಮುಳಬಾಗಿಲು ಹತ್ತಿರ ಗ್ಯಾಸ್ ಸಿಲಿಂಡರ್ ಟ್ಯಾಂಕರ್ ಮತ್ತು ಲಾರಿ ಮುಖಾಮುಖಿ accidentಆಗಿ 4 ಜನ ಮೃತರಾಗಿರುವ ಸಂಗತಿಯನ್ನು ಇಲ್ಲಿ ಪ್ರಸ್ತಾಪಿಸಿ, ಅವರಿಗೆ ಪರಿಹಾರ ಕೊಡಬೇಕೆಂದು ಆಗ್ರಹಿಸಿದ್ದಾರೆ. ಒಂದೇ ಕುಟುಂಬದ 2 ಜನ, ಇತರ 2 ಜನ ಮತ್ತು ಗಾಯಗೊಂಡಿರುವವರಿಗೆ ಕೂಡಲೇ ಪರಿಹಾರ ಕೊಡಬೇಕೆಂದು ಕೋರಿದ್ದಾರೆ. ನಾವು ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟು, ಇಂತಹ ಪ್ರಸಂಗಗಳಲ್ಲಿ ಏನೊಂದು ಪರಿಹಾರವನ್ನು ಕೊಡಬೇಕೋ, ಅದನ್ನು ಕೊಡಿಸುತ್ತೇವೆ.